


ನಿಮ್ಮ ಮೊದಲ ಹೆಂಡತಿ ಸತ್ತಿದ್ದು ಹೇಗೆ?
ವಿಷ ಸೇವಿಸಿ.
ಎರಡನೆಯ ಹೆಂಡತಿ ಸತ್ತಿದ್ದು ಹೇಗೆ?
ಅವಳಿಗೆ ಗುಂಡು ಹೊಡೆಯಬೇಕಾಯಿತು.
ಯಾಕೆ?
ಅವಳು ವಿಷ ಕುಡಿಯಲು ಸಿದ್ಧಳಿರಲಿಲ್ಲ!

★★★

ಮ್ಯಾರೇಜ್ ಬ್ಯೂರೋಗೆ ಯುವತಿಯೊಬ್ಬಳು ಹೋದಾಗ ಅಲ್ಲಿಯ ವ್ಯವಸ್ಥಾಪಕ, ಯುವಕನೊಬ್ಬನ ಫೋಟೋ

ತೋರಿಸುತ್ತಾ ಹೇಳಿದ, ನೋಡಮ್ಮ, ಈ ಹುಡುಗ 5 ಅಡಿ, 3 ಇಂಚಿದ್ದಾನೆ. ಬಿ.ಇ.ಯಲ್ಲಿ ರ್‍ಯಾಂಕ್ ಬಂದಿದ್ದಾನೆ.

ಸಾಫ್ಟ್ ವೇರ್ ಎಂಜೀನಿಯರ್, ಒಳ್ಳೇ ಸ್ಯಾಲರಿ ಬರುತ್ತೆ. ಫ್ಯಾಮಿಲಿ ಬ್ಯಾಗ್ರೌಂಡ್ ತುಂಬಾ ಚೆನ್ನಾಗಿದೆ. ಆದರೆ

ಹುಡುಗ ಫೋಟೋದಲ್ಲಿ ಇದ್ದ ಹಾಗಿಲ್ಲ, ಸ್ವಲ್ಪ ಕಪ್ಪು, ಅಷ್ಟೆ.

ವ್ಯವಸ್ಥಾಪಕನ ವರ್ಣನೆಯನ್ನು ಸಾವಧಾನದಿಂದ ಕೇಳಿದ ಯುವತಿ ಹೇಳಿದಳು, ಎಲ್ಲಾ ಸರಿ, ಆದರೆ ಇದೇ

ಕ್ವಾಲಿಟಿ ಇರುವ ಬಿಳಿ ಕಲರ್‌ನ ಹುಡುಗನನ್ನು ತೋರಿಸಿ!

★★★

ಅತಿಥಿಗಳಿಗೆ ಗ್ರೀನ್ ಟೀ ಕುಡಿಸುವ ಲಾಭಗಳು ಈ ಕೆಳಕಂಡಂತಿವೆ
ನೀವು ಶ್ರೀಮಂತರೆಂದು ಬಿಂಬಿಸಿಕೊಳ್ಳಬಹುದು.
ಗ್ರೀನ್ ಟೀ ಜೊತೆಗೆ ಬಿಸ್ಕತ್‌ಖಾರ ಕೊಡುವ ಅಗತ್ಯವಿರುವುದಿಲ್ಲ.
ಹಾಲು ಉಳಿಯುವುದು.
ಗ್ರೀನ್ ಟೀಯನ್ನು ಎರಡನೆ ಬಾರಿ ಕೇಳುವುದಿಲ್ಲ.
ಆ ಅತಿಥಿ ಮತ್ತೊಮ್ಮೆ ನಿಮ್ಮ ಮನೆಗೆ ಬರುವುದಿಲ್ಲ.

★★★

ಹೆಂಡತಿ: ನಾನು ನನ್ನ ಹಳೆಯ ಬಟ್ಟೆಗಳನ್ನು ದಾನ ಮಾಡಬೇಕು.

ಗಂಡ: ಅದನ್ನೆಲ್ಲಾ ಎಸೆದು ಬಿಡು. ಅದನ್ನೆಲ್ಲಾ ಯಾಕೆ ದಾನ ಮಾಡ್ತೀಯ?

ಹೆಂಡತಿ: ಎಸೆಯುವುದು ಯಾಕೆ? ಜಗತ್ತಿನಲ್ಲಿ ತುಂಬಾ ಹೆಂಗಸರು ಬಡವರಾಗಿದ್ದು, ಹಸಿದಿದ್ದಾರೆ. ಪಾಪ, ಯಾರಾದಳೊಬ್ಬಳು ನನ್ನ ಬಟ್ಟೆಗಳನ್ನು ಉಟ್ಕೋತಾಳೆ.

ಗಂಡ: ನಿನ್ನ ಸೈಜಿನ ಹೆಂಗಸರು ಹಸಿದಿರಲು ಸಾಧ್ಯವೇ ಇಲ್ಲ!

★★★

ಮನೆಯೊಡತಿ ತನ್ನ ಕೆಲಸದವಳಿಗೆ ಗದರಿದಳು, ಅಲ್ಲಾ ಮಲ್ಲಿ, ನೀನು ಮೂರು ದಿನಗಳಿಂದ ಕೆಲಸಕ್ಕೆ ಬರಲಿಲ್ಲ, ನನಗೆ ಒಂದು ಮಾತನ್ನೂ ಯಾಕೆ ಹೇಳಲಿಲ್ಲ?

ಅಕ್ಕಾ, ನಾನು ವಾಟ್ಸ್ಯಾಪ್ ಮತ್ತು ಫೇಸ್‌ಬುಕ್‌ನಲ್ಲಿ, ಗೋಯಿಂಗ್ ಟು ವಿಲೇಜ್ ಫಾರ್ ತ್ರೀ ಡೇಸ್ ಎಂದು ತಿಳಿಸಿದ್ದೆ. ಸಾಹೇಬರು ಮಿಸ್ ಯೂ ಮಲ್ಲಿ... ಎಂದು ಕಾಮೆಂಟ್ ಸಹ ಮಾಡಿದ್ದರು.

★★★

ಗಂಡ ಕ್ಷೌರ ಮಾಡಿಸಿಕೊಂಡು ಮನೆಗೆ ಬಂದ. ಬಂದವನೇ ಕನ್ನಡಿ ಎದುರು ನಿಂತು ಹೆಂಡತಿಗೆ ಹೇಳಿದ, ನೋಡೇ, ನಾನು ನಿನಗಿಂತ ಹತ್ತು ವರ್ಷ ಚಿಕ್ಕವನಂತೆ ಕಾಣಿಸುತ್ತಿದ್ದೇನೆ, ಅಲ್ವಾ?

ನೀವು ತಲೆಬೋಳಿಸಿಕೊಂಡು ಬನ್ನಿ, ಆಗ ನೀವು, ಈಗ ತಾನೇ ಹುಟ್ಟಿದ ಮಗುವಿನಂತೆ ಕಾಣಿಸುತ್ತೀರಿ! ಎಂದಳು ಹೆಂಡತಿ.

**(ಸಂಗ್ರಹ) ಡಿ.ಎನ್.ಶ್ರೀನಾಥ್**

ಡಾಕ್ಟರ್: ನಿಮ್ಮನ್ನು ಡಿಸ್‌ಚಾರ್ಜ್ ಮಾಡಲಾಗಿದೆ. ನೀವೀಗ ಮನೆಗೆ ಹೋಗಬಹುದು.

ರೋಗಿ: ಮನೆ ಎಲ್ಲಿದೆ ಡಾಕ್ಟರೇ? ಅದನ್ನು ಮಾರೀನೇ ಇಷ್ಟು ದಿನ ನಿಮಗೆ ಫೀಸ್ ಕಟ್ಟುತ್ತಿದ್ದೇನೆ.

★★★

ಮೇಷ್ಟ್ರು: 'ಜಿಪುಣ' ಎಂಬ ಶೀರ್ಷಿಕೆಯಲ್ಲಿ ಪ್ರಬಂಧವನ್ನು ಬರೆಯೋಕೆ ಹೇಳಿದ್ದೀನಲ್ಲ, ಯಾಕೆ ಬರೆದಿಲ್ಲ?

ರಮೇಶ್: 'ಇಂಕ್' ಖಾಲಿಯಾಗುತ್ತದೆ ಅಂದುಕೊಂಡು ಬರೆದಿಲ್ಲ ಸರ್.

★★★

ರಮ್ಯಾ: ನಮ್ಮ ಬೀದಿಯ ಕೊನೆ ಮನೆಯವರು ತುಂಬಾ ಧನವಂತರೆಂದು ಕಾಣುತ್ತದೆ ದಿವ್ಯ.

ದಿವ್ಯ: ಅದು ಹೇಗೆ ಹೇಳುತ್ತೀರಿ?

ರಮ್ಯಾ: ಅತ್ತೆ– ಸೊಸೆ ಜಗಳವನ್ನು ಆಡೋಕೆ ಹೊಸದಾಗಿ ಒಳ ಕ್ರೀಡಾಂಗಣ ಒಂದನ್ನು ನಿರ್ಮಿಸಿದ್ದಾರಂತೆ.

★★★

ಹೆಂಡತಿ: ನಮ್ಮ ಮನೆಯಲ್ಲಿ ಯಾಕೆ ಸಿಸಿ ಕ್ಯಾಮೆರಾವನ್ನು ಅಳವಡಿಸುತ್ತಿದ್ದೀರಿ?

ಗಂಡ: ಜಗಳವಾಡುವಾಗ ನೀನು ನನ್ನನ್ನು ಹೊಡೆಯುತ್ತೀಯ ಎಂದರೆ ನಿನ್ನ ಮನೆಯಲ್ಲಿ ಯಾರೂ ನಂಬುತ್ತಿಲ್ಲ.

★★★

ರೋಗಿ: ಸೂಜಿಯನ್ನು ನೀವೇ ಹಾಕ ಬಾರದೇ ಡಾಕ್ಟರ್, ಯಾಕೆ ನನ್ನನ್ನೇ ಚುಚ್ಚಿಕೊಳ್ಳೋಕೆ ಹೇಳುತ್ತೀರಿ?

ಡಾಕ್ಟರ್: ಇದು 'ಸೆಲ್ಫ್ ಸರ್ವಿಸ್ ಆಸ್ಪತ್ರೆ' ಎಂದು ನಿಮಗೆ ಗೊತ್ತಿಲ್ವೆ?

★★★

ಗಂಡ: ನೀನೇ ನನಗೆ ಹೆಂಡತಿಯಾಗುವೆ ಎಂದು ನಮ್ಮ ಶಾಲೆಯ ಟೀಚರ್ ಆಗಿನ ಕಾಲದಲ್ಲೇ ಹೇಳಿಬಿಟ್ಟರು.

ಹೆಂಡತಿ: ಅದ್ಹೇಗೆ ಹೇಳಿದರು?

ಗಂಡ: ಎಮ್ಮೆ ಒಂದನ್ನು ಮೇಯಿಸೋಕೆ ಮಾತ್ರವೇ ನೀನು ಅರ್ಹ ಎಂದಿದ್ದರು.

**–ಡಾ. ವಿ. ಪುಗಳೇಂದಿ, ಬಳ್ಳಾರಿ**